ವಾದಿಸುತ್ತಿದ್ದ. ದೇವದತ್ತ, 'ನೀನೂ ಬಾಣ ಪ್ರಯೋಗಿಸಿ ಅಂಥದೇ ಪಕ್ಷಿಯನ್ನು ಕೊಂದು ಬೇಕಾದರೆ ನೀನೇ ಇಟ್ಟುಕೋ, ಆದರೆ ಇದು ನನ್ನ ಬೇಟೆ, ನನಗೆ ಕೊಟ್ಟುಬಿಡು...' ಎಂದು ಕಿತ್ತು ಕೊಳ್ಳಲು ಹೋಗುತ್ತಿದ್ದ. ಆದರೆ ಸಿದ್ಧಾರ್ಥ, 'ಪ್ರಾಣ ಕೊಡಲು ಶಕ್ತಿ ಇಲ್ಲದವನಿಗೆ ಪ್ರಾಣ ತೆಗೆಯುವ ಅರ್ಹತೆ ಇಲ್ಲ. ಇಂಥದೇ ಒಂದು ಪಕ್ಷಿಯನ್ನು ನೀನೇ ಸೃಷ್ಟಿಸಿ, ಅದನ್ನು ಬೇಕಾದರೆ ಕೊಂದುಕೋ. ಇದು ಪ್ರಕೃತಿಯ ಸೃಷ್ಟಿಯೇ ಹೊರತು ನಿನ್ನದಲ್ಲ. ನಾನು ಸಾಯುತ್ತಿದ್ದ ಇದನ್ನು ರಕ್ಷಿಸಿದ್ದರಿಂದ ಇದು ನನಗೆ ಸೇರಬೇಕಾದ್ದು' ಎಂದು ವಾದಿಸುತ್ತಿದ್ದ.

ನಾನು ಸಿದ್ಧಾರ್ಥನಿಗೆ, 'ಬೇಟೆಯಾಡುವುದು ಕ್ಷತ್ರಿಯರ ಸಹಜ ಧರ್ಮ. ಮುಂದೆ ಶತ್ರುಗಳೊಡನೆ ಕಾದಾಡಲು ಬೇಟೆ ಒಂದು ತರಬೇತಿಯಿದ್ದಂತೆ. ನೀನೂ ಬೇಟೆಯಾಡಿಕೊಂಡು ಬಾ. ಆತನ ಬೇಟೆಯನ್ನು ಅವನಿಗೆ ಕೊಟ್ಟುಬಿಡು' ಎಂದೆ. ತಟ್ಟನೆ 'ಕೊಲ್ಲುವುದು ಯಾವ ಧರ್ಮವಮ್ಮ?' ಎಂದುಬಿಟ್ಟ.

ನನಗೆ ಮಾತು ಕಟ್ಟಿಹೋಯಿತು. ನನ್ನ ಅಕ್ಕ ಮಾಯಾದೇವಿಯಂಥದೇ ಕರುಣಾಮಯಿ ಹೃದಯ ಸಿದ್ಧಾರ್ಥನದು. ಅವತ್ತು, ಸಿದ್ಧಾರ್ಥ ಹುಟ್ಟಿದ ದಿನ, ತುಂಬಿದ ಬಂಡಿಯ ರೈತ ಎತ್ತುಗಳಿಗೆ ನೀಡುತ್ತಿದ್ದ ಹಿಂಸೆಯನ್ನು ನೋಡಿ ತನ್ನನ್ನು ಹೊರುತ್ತಿದ್ದ ಬೋವಿಗಳಿಗೂ ಅಷ್ಟೇ ನೋವಾಗುತ್ತಿರಬಹುದೆಂದು ಭಾವಿಸಿದ ಮಾಯಾದೇವಿ ಮೇನೆಯಿಂದ ಕೆಳಗಿಳಿದದ್ದು, ತನ್ನಂತೆಯೇ ಗರ್ಭ ಧರಿಸಿ ಕರು ಹಾಕಿದ್ದ ಕಲ್ಯಾಣಿ ಹಸುವಿಗೂ ಅದೆಷ್ಟು ನೋವು ಆಗಿರಬಹುದೆಂದು ಪದೇ ಪದೇ ಮರುಕಪಡುತ್ತಿದ್ದುದು ಎಲ್ಲವೂ ನೆನಪಾಯಿತು. ಆ ಕ್ಷಣಕ್ಕೆ ಇಬ್ಬರ ವಾದವೂ ಸರಿ ಅನ್ನಿಸುತ್ತಿದ್ದರೂ, ಯಾರೊಬ್ಬರೂ ಸೋಲಲು ತಯಾರಿರದುದರಿಂದ, 'ಶುದ್ಧೋದನರೇ ಬಂದು ತೀರ್ಮಾನಿಸಲಿ, ಅಲ್ಲಿಯವರೆಗೆ ಆ ಪಕ್ಷಿ ಸಿದ್ಧಾರ್ಥನ ಬಳಿಯೇ ಇರಲಿ. ಈಗ ಇಬ್ಬರೂ ಬಂದು ಊಟ ಮಾಡಿ' ಎಂದು ಸಮಜಾಯಿಷಿಸಲು ನಾನು ನೋಡಿದರೆ, ನಾದಿನಿ ಅಮಿತಾ ತನ್ನ ಮಗನ ಪರ ವಹಿಸಿಕೊಂಡು ಬಂದು ಜಗಳವನ್ನು ಇನ್ನಷ್ಟು ದೊಡ್ಡದು ಮಾಡಿದಳು. ನಾನು ನನ್ನ ಮಗನ ಪರ ವಹಿಸಿ ಪಕ್ಷಪಾತ ಧೋರಣೆ ಅನುಸರಿಸುತ್ತಿರುವುದಾಗಿ ದೂಷಿಸಿದಳು. ದೇವದತ್ತನು, 'ಅತ್ತೆ, ನೀವು ಸಿದ್ಧಾರ್ಥನ ಪರ ವಹಿಸಿಕೊಂಡು ಬರಲು ಅವನೇನೂ ನಿಮ್ಮ ಸ್ವಂತ ಮಗನಲ್ಲ, ನೀವು ಸುಮ್ಮನಿರಿ. ನಾನು ಅವನನ್ನು ವಿಚಾರಿಸಿಕೊಳ್ಳುತ್ತೇನೆ...' ಎಂದು ದನಿಗೂಡಿಸಿದ. ಈ ಮಾತಿನಿಂದ ನನಗೆ ಆಘಾತವಾಯಿತು. ಈ ವಿಚಾರ ಸಿದ್ಧಾರ್ಥನಿಗೆ ಈವರೆಗೂ ತಿಳಿಯದಂತೆ ನೋಡಿಕೊಂಡಿದ್ದೆ. ಆದರೆ ದೇವದತ್ತನ ಈ ಮಾತು ಸಿದ್ಧಾರ್ಥನನ್ನು ದಂಗುಬಡಿಸಿತು. ಆತ ಪಕ್ಷಿಯನ್ನು ಅಲ್ಲಿಯೇ ಬಿಸಾಡಿ, ಸುಳ್ಳು ಹೇಳಿರುವ ನನ್ನನ್ನು ಪ್ರಶ್ನಿಸಲು ಬರುತ್ತಾನೆ ಎಂದುಕೊಂಡಿದ್ದೆ. ಆದರೆ ಆತ ಒಂದರೆಕ್ಷಣ ನನ್ನ ಮುಖವನ್ನು ದಿಟ್ಟಿಸಿ ನೋಡಿ ಅಂತರ್ಮುಖಿಯಾದಂತೆ ಕಂಡರೂ, ಪಕ್ಷಿಯನ್ನು ಕೊಡುವುದಿಲ್ಲವೆಂಬ ಹಟ ಮುಂದುವರೆಸಿದ.

(ಸಶೇಷ)

## ಪ್ರತಿಕ್ರಿಯೆ




### ಬದುಕಿನ ವೈರುಧ್ಯಗಳ ಚಿತ್ರಣ

ವಸುಮತಿ ಉಡುಪ ಅವರ ಧಾರಾವಾಹಿಯಲ್ಲಿ ಚಿದಾನಂದನ ಪರಿಸ್ಥಿತಿ ಕರುಣೆ ಮೂಡಿಸಿತ್ತು. ಶೀಲಾಳದು ನಿರೀಕ್ಷಿತ. ಮಗ ಭಾರ್ಗವ ಹೆಂಡತಿಯ ದಾಸ. ಭಾಮಳ ಬದುಕು ಅಚ್ಚುಕಟ್ಟಾಗಿ ಇರುವುದನ್ನು ನೋಡಿ ಅನುಭವಿಸುವ ಸ್ಥಿತಿ ಅಪ್ಪನಿಗಿಲ್ಲ. ಕೊನೆಯ ಎರಡು ಪ್ಯಾರಾಗಳು ಬದುಕಿನ ನೈಜಚಿತ್ರಣ ಮೂಡಿಸಿದವು. ಅದಕ್ಕೆ ಪೂರಕವಾಗಿ ಕಗ್ಗದ ಸಾಲುಗಳು. ಕಾಲ ಎಲ್ಲವನ್ನೂ ಮರೆಸುತ್ತದೆ. ನಿರೂಪಣೆ ಮನಸ್ಸನ್ನು ಸೆಳೆಯಿತು.

—ಸುಬ್ಬಲಕ್ಷ್ಮಿ ಹೆಚ್.ಕೆ., ಕೋಲಾರ

### ತುಂಬ ಒಳ್ಳೆಯ ಧಾರಾವಾಹಿ

ಚಿದಾನಂದ ಮನೆಗೆ ಸರ್ವಸ್ವವನ್ನು ಧಾರೆ ಎರೆದಾದ ಮೇಲೆ ಸೊಸೆಯ ಸ್ವಾರ್ಥ, ತಾತ್ಸಾರದಿಂದ ಏಕಾಂಗಿತನ, ಆರೋಗ್ಯ ಸಮಸ್ಯೆಗೆ ಗುರಿಯಾಗಿ ಮಗಳ ಕರುಣೆಯಿಂದ ಸಮಸ್ಯೆಯಿಂದ ಪಾರಾಗುವ ದೃಶ್ಯ ಮನ ಕಲಕಿತು.

—ಭಾರತೀ ಗಂಗಾಧರ್, ಬೆಂಗಳೂರು

### ಆರೋಗ್ಯದ ಜಾಗೃತಿ ವ್ಯಾಪಕವಾಗಲಿ

ಗುರುವಾರ 'ಸುಧಾ' ಬರುವಿಗಾಗಿ ಕಾಯ್ತಾ ಇದ್ದೆ. ಚಿದಾನಂದನ ಹೆಂಡತಿ ಸುನಂದಮ್ಮಳಿಗೆ ಬ್ರೆಸ್ಟ್ ಕ್ಯಾನ್ಸರ್ ಆದರೂ ಸಂಕೋಚದಿಂದ ಯಾರಿಗೂ ತಿಳಿಸದೇ ತನ್ನ ಪ್ರಾಣ ಕಳೆದುಕೊಳ್ಳಬೇಕಾಯಿತು. ಕ್ಯಾನ್ಸರ್ ಗುಣಪಡಿಸಬಹುದು ಎಂದು ಸರಕಾರದ ಪ್ರಚಾರ ಆಕಾಶವಾಣಿಯಲ್ಲಿ ದಿನಾ ಬರುತ್ತಾ ಇದ್ದಾಗಲೇ ಕಾಕತಾಳೀಯದಂತೆ 'ಸುಧಾ'ದಲ್ಲೂ ಧಾರಾವಾಹಿ ಮುಖಾಂತರ ಬಂದಿದ್ದು ಎಲ್ಲಾ ಹೆಣ್ಣುಮಕ್ಕಳಿಗೂ ಅರಿವು ಮೂಡಿಸಿದೆ. ನಾನು ಆರೋಗ್ಯ ಇಲಾಖೆಯಲ್ಲಿ ಕೆಲಸ ಮಾಡಿ ನಿವೃತ್ತಳಾಗಿದ್ದು, ಎಲ್ಲರೂ ಆರೋಗ್ಯ ಜಾಗೃತಿ ವಹಿಸಬೇಕೆಂದು ಕೋರುತ್ತೇನೆ.

—ಸಿ. ಸರಳಾಮಣಿ, ಮೈಸೂರು

### ಕಣ್ಣುಗಳು ಒದ್ದೆಯಾದವು

ತಂದೆಯ ವಿಸ್ಮರಣೆ, ಮಗಳ ಕಪಟವಿಲ್ಲದ ಪ್ರೀತಿ, ಎಲ್ಲವನ್ನೂ ವ್ಯವಹಾರದಲ್ಲಿ ನೋಡುವವರ ಕಣ್ಣು ತೆರೆಸುವಂತಿವೆ. ಕೊನೆಗೆ ಕಣ್ಣುಗಳು ಒದ್ದೆಯಾದವು. ಲೇಖಕಿಗೆ ಧನ್ಯವಾದ.

—ಕೃಷ್ಣ ಕುಲಕರ್ಣಿ

### ಮೋನಪ್ಪನವರ ಆಕರ್ಷಕ ಕಲೆ

ಎಚ್.ಎಸ್. ಮೋನಪ್ಪನವರ ಕಲೆಯಲ್ಲಿ ನಮ್ಮ ಮನಸೂರೆಗೊಂಡಿದ್ದ ಧಾರಾವಾಹಿ ಮುಗಿದಾಗ ನನಗೆ ಅರಿವಿಲ್ಲದೆ ಕಣ್ಣಂಚಿನಲ್ಲಿ ನೀರು ಬಂದಿತು.

—ಕಮಲಾದೇವಿ ರಾಜಶೇಖರ ಹಳ್ಳೂರ್

### ಸುತ್ತಮುತ್ತ ನಡೆಯುತ್ತಿರುವ ಕಥೆ

'ಸುಧಾ' ಬಂದ ಕೂಡಲೇ ಧಾರಾವಾಹಿ ಓದಿ, ಮತ್ತೆ ಒಂದು ವಾರ ಕಾಯಬೇಕಲ್ಲ ಅನಿಸುತ್ತಿತ್ತು. ನಮ್ಮ ಸುತ್ತಮುತ್ತ ನಡೆಯುತ್ತಿರುವ ಕಥೆಯೇನೋ ಅಂತ ಅನಿಸಿತು.

—ಜಯಲಕ್ಷ್ಮಿ ಉಪಾಧ್ಯಾಯ, ಕಂಚಾರ್ತಿ

### ವಾಸ್ತವಕ್ಕೆ ಹತ್ತಿರವಾದ ಕಥನ

ಕಾದಂಬರಿಯ ಕಡೆಯ ಕಂತು ಬಹಳ ಪರಿಣಾಮಕಾರಿಯಾಗಿತ್ತು. ನೈಜತೆ, ವಾಸ್ತವಕ್ಕೆ ಪೂರಕವಾದ ಕಾದಂಬರಿ ಎನ್ನುವುದರಲ್ಲಿ ಯಾವ ಉತ್ಪ್ರೇಕ್ಷೆಯೂ ಇಲ್ಲ.

—ಗೀತಾ ಮೂರ್ತಿ

### ಮುದ ಕೊಟ್ಟ ಅಂತ್ಯ

ತಾಯಿ ಇಲ್ಲದ ಮಕ್ಕಳನ್ನು ಜತನದಿಂದ ಕಾಪಾಡಿದ ಚಿದಾನಂದ, ತನ್ನ ಇಳಿ ವಯಸ್ಸಿನಲ್ಲಿ ಮಗಳ ಜೊತೆ ಮಗುವಾಗಿ ಇರುವಂತಾಗಿದ್ದು ಮನಸ್ಸಿಗೆ ಮುದವೆನಿಸಿತು. ಕಥೆಯ ಜೊತೆ ಸುಂದರ ಚಿತ್ರಗಳು ಗಮನ ಸೆಳೆಯುವಂತಿದ್ದವು.

—ಶೋಭಾ ಸಂಪತ್, ಬೆಂಗಳೂರು

### ಮನಸ್ಸು ನಿರಾಳ

ಕಾದಂಬರಿ ತುಂಬ ಬೇಗ ಮುಗಿದಂತೆನಿಸಿತು. ಮೂರನೇ ವಾರದಿಂದಲೇ ಶತಾಬ್ದಿ ವೇಗದಲ್ಲಿ ಕಥೆ ಓಡಿದೆ. ಆದರೂ ಒಂದೊಂದು ವಾಕ್ಯವೂ ತಲೆಮಾರಿನ ಗತಿ ಬದಲಿಸುವಂಥ ವಿವರ ಹೊಂದಿದ್ದು ಕಾದಂಬರಿಕಾರ್ತಿಯ ಪ್ರತಿಭೆಗೆ ಸಾಕ್ಷಿ. ಕಡೇ ವಾರದಲ್ಲಿ ಕೋಲ್ಮಿಂಚಿನಂತೆ ಮಗಳು ಬಂದು ನಮ್ಮ ಮನಸ್ಸನ್ನೂ ನಿರಾಳ ಮಾಡಿದ್ದು ಸಮಾಧಾನಕರ. ಕಲಾವಿದ ಮೋನಪ್ಪ ಅವರ ಜಾಣತನದ ಪ್ರತಿಭೆ ಅನಾವರಣಗೊಂಡಿದೆ.

—ಕೆ.ಎಸ್. ಮಧ್ವರಾಯ, ಬೆಂಗಳೂರು

### ಮಗಳ ವಾತ್ಸಲ್ಯ

ವಿಶ್ರಾಂತ ಜೀವನ ಸುಗಮವಾಗಿ ನಡೆಸಲಾಗದ ಪರಿಸ್ಥಿತಿ, ಮಕ್ಕಳ ನಿರ್ಲಕ್ಷ್ಯ, ಅಸಹಕಾರದಿಂದಾಗಿ ವೃದ್ಧಾಶ್ರಮ ಬೆಳೆಯುತ್ತಿದೆ. ಧಾರಾವಾಹಿಯಲ್ಲಿ ಇಂತಹ ಸನ್ನಿವೇಶ ರೂಪುಗೊಂಡರೂ, ಮಗಳು ಅನಿರೀಕ್ಷಿತವಾಗಿ ಬಂದು ಮಾನವೀಯತೆ ಮೆರೆದು ತೋರಿಸುವ ಮಮತೆ, ಕರುಣೆ, ವಾತ್ಸಲ್ಯ, ಪ್ರೀತಿ, ಸಹಕಾರ ಶ್ಲಾಘನೀಯ. .

—ಟಿ.ವಿ. ರಘೋತ್ತಮ, ಮೈಸೂರು